ಶ್ರೀ ಕೆ.ಹೆಚ್. ರಾಮಕೃಷ್ಣಯ್ಯ.—೧೯೮೧-೮೨ರಲ್ಲಿ ೪ ಲಕ್ಷ ೨೦ ಸಾವಿರಕ್ಕೆ ಅಂದಾಜು ತಯಾರಿಸಲಾಗಿತ್ತು. ಇದರಿಂದ ಒಂದು ಎಕರೆಗೆ ೨ ೭೪೫ ರೂ. ಆದಂತಾಯಿತು. ಪುನಃ ೧೯೮೨-೮೩ರಲ್ಲಿ ಎಸ್.ಆರ್. ರೇಟ್ ಜಾಸ್ತಿ ಆಗಿದೆ. ಆದ್ದರಿಂದ ಈ ಕೆಲಸವನ್ನು ಸರ್ಕಾರ ಮಾಡಿ ಮುಗಿಸುವ ಬಗ್ಗೆ ಭರವಸೆ ಕೊಡುತ್ತದೆಯೇ ?

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೆ, ಎಕರೆವಾರು ೨,೭೪೫ ರೂಪಾಯಿ ಇದೆ. ಒಂದು ಅಥವಾ ಎರಡು ವರ್ಷ ಹೋದರೆ ಅದು ಜಾಸ್ತಿ ಆಗುತ್ತದೆ, ಈ ಕೆಲಸ ಆವಶ್ಯಕವಾಗಿ ಮಾಡಬೇಕೆಂದು ಸರ್ಕಾರದಲ್ಲಿ ಮನಸ್ಸು ಇರುವುದರಿಂದ ೧೯೮೨-೮೩ರಲ್ಲಿ ಇದನ್ನು ಮಂಜೂರು ಮಾಡುವುದಕ್ಕೆ ಸರ್ಕಾರ ಉದ್ದೇಶಿಸಿದೆ.

ಶ್ರೀ ವಿ.ಎಲ್. ಶಿವಪ್ಪ.—ಯಾರೋ ಕೆಲವರು ಪರಿಶಿಷ್ಟ ಜಾತಿಯವರು ಜಾಗವನ್ನು ಪಡೆದು ಕೊಂಡು ಇಲ್ಲಿನ ಕೆಲಸಗಳಿಗೆ ತಡೆಯೊಡ್ಡುವ ರಾಜಕಾರಣ ಮಾಡುತ್ತಿರುವುದು ನಿಜವೇ ? ಇಂತಹ ಸಂದರ್ಭ ಇರುವಾಗ ಈ ಕೆರೆ ಕಟ್ಟಡ ೧೯೮೨-೮೩ರಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಕಾಗೋಡು ತಿಮ್ಮಪ್ಪ.—ಇದಕ್ಕೆ ಉತ್ತರವನ್ನು ಕೊಟ್ಟಿದ್ದೇನೆ. ಅಲ್ಲಿ ಕೆಲವಾರು ಅಬ್ಜಕ್ಷನ್ಸ್ ಬಂದಿದ್ದುದು ನಿಜ. ಅವು ಬಂದ ಮೇಲೆ ಮುಖ್ಯ ಇಂಜಿನಿಯರ್ ಅವರು ಅಲ್ಲಿಗೆ ಹೋಗಿ ಪೂರ್ಣ ಪರಿಶೀಲನೆ ಮಾಡಿ ಖುದ್ದಾಗಿ ನೋಡಿಕೊಂಡು ಬಂದಿದ್ದಾರೆ. ಇದರ ಅಂದಾಜು ೪ ಲಕ್ಷದ ೨೫ ಸಾವಿರ ರೂಪಾಯಿ ಆಗಿದೆ. ೧೯೮೨-೮೩ರಲ್ಲಿ ಇದನ್ನು ಮಂಜೂರು ಮಾಡುವ ನಿಲುವನ್ನು ಸರ್ಕಾರ ತೆಗೆದುಕೊಂಡಿದೆಯೆಂದು ನಾನು ಈಗಾಗಲೇ ಹೇಳಿದ್ದೇನೆ.

Constitution of Committee on Welfare of Backward Classes and Minorities.

699. SRI M. GANGANNA (Kustagi).—Will the Minister for Social Welfare and Backward Classes be pleased to state.—

(a) whether the matter of constitution of a Committee on Welfare of Backward Classes and Minorities is under consideration of the Government as per the rules of Procedure and Conduct of Business in the Karnataka Legislature on the lines of Committee on the Welfare of Scheduled Castes and Schedule Tribes :

(b) if so, the stage at which it stands ?

SRI P. VENKATARAMANA (Minister for Social Welfare and Backward Classes).—

(a) Yes.

(b) The matter is under consideration.

ಶ್ರೀ ಎಂ. ಗಂಗಣ್ಣ.—ಅಧ್ಯಕ್ಷರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕಲ್ಯಾಣ ಸಮಿತಿ ರೀತಿಯಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತ ಕಲ್ಯಾಣ ಸಮಿತಿಯನ್ನು ರಚಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ಮಾನ್ಯ ಮಂತ್ರಿಗಳು ಉತ್ತರಿಸಿದ್ದಾರೆ. ಈ ಬಗ್ಗೆ ಕಳೆದ ಒಂದು ವರ್ಷದಿಂದ ಒತ್ತಾಯ ಮಾಡುತ್ತಿದ್ದೇವೆ. ಸರ್ಕಾರ ಈ ಕಡೆ ಗಮನಹರಿಸಿಲ್ಲ. ಈ ಬಗ್ಗೆ ಸರ್ಕಾರ ಆಸಕ್ತಿ ಹೊಂದಿಲ್ಲ ಎಂದು ಕಾಣುತ್ತದೆ. ಆದ್ದರಿಂದ, ಈ ಸದನ ಮುಗಿಯುವುದರೊಳಗೆ ಸಮಿತಿಯನ್ನು ರಚಿಸಲಾಗುತ್ತದೆಯೇ?

ಶ್ರೀ ಪಿ. ವೆಂಕಟರಮಣ.—ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಮಿತಿಯನ್ನು ರಚಿಸುವ ವಿಚಾರದಲ್ಲಿ ಸರ್ಕಾರ ತೀರ್ಮಾನವನ್ನು ತೆಗೆದುಕೊಂಡಿದೆ. ಆ ಬಗ್ಗೆ ನಿಯಮಾವಳಿ ರಚಿಸಬೇಕೆಂದು ಮಾನ್ಯ ಕಾನೂನು ಸಚಿವರಿಗೆ ತಿಳಿಸಲಾಗಿದ್ದು ಅದು ಬಂದಮೇಲೆ ಸಭೆಯ ಮುಂದೆ ಇಟ್ಟು ಅಂಗೀಕಾರ ತೆಗೆದುಕೊಳ್ಳಬೇಕಾಗುತ್ತದೆ. ಆಗ ಅದು ಕಾರ್ಯಗತವಾಗುತ್ತದೆ.

SRI R. PRABHAKAR TELKAR —Sir, about 70 to 80 legislators have represented to the Hon'ble Minister for Constitution of the Committee of Backward Classes and Minirities and it is since more than a year. I would like to ask the Minister as to whether this Committee would be constituted by making suitable amendments to the rules in this session itself. Will the Minister take immediate action to see that this Committee is constituted?

SRI P. VENKATARAMANA.—As I have already stated the Hon'ble Minister for Law and Parliamentary Affairs has to frame rules for effecting amendments to Rules 276A, 267A, 271I, 267 K etc. The Rules have already been framed and they have to be accepted by this House and brought into force.

SRI R PRABHAKAR TELKAR.—I contacted the Hon'ble Minister in this regard about three or four months back. In the last session also, I stressed for the constitution of this Committee. But.....

MR. SPEAKER.—The Government has taken a decision It is for the Rules Committee to suitably amend the rules. That will be done by the Rules Committee.

SRI R PRABHAKAR TELKAR.—That can be taken up in this session itself. Suitable amendment can be moved and this Committee can be formed.

ಶ್ರೀ ಜೆ. ಎಚ್. ಪಟೇಲ್.—ಸನ್ಮಾನ್ಯ ಅಧ್ಯಕ್ಷರೆ, ಈ ಕಲ್ಯಾಣ ಸಮಿತಿ ಎಂದರೆ ಏನು ನಮ್ಮ ಕಡೆ ಕಲ್ಯಾಣ ಎಂದರೆ ಮದುವೆ ಎಂದು ಅರ್ಥ. ಶಾಸಕರನ್ನು ಸೇರಿಸಿಬಿಟ್ಟು ಹಿಂದುಳಿದವರ ಅಭಿವೃದ್ಧಿ ಮಾಡಲು ಅಧಿಕಾರ ನೀಡುವುದೇ ಕಲ್ಯಾಣ ಸಮಿತಿ ಎಂದರೆ ಏನು ಇದರ ವ್ಯಾಪ್ತಿ ಏನು ಇದರಲ್ಲಿ ಯಾರು ಯಾರು ಸದಸ್ಯರು ಇರುತ್ತಾರೆ ಇವರು ಯಾವ ರೀತಿ ಕಲ್ಯಾಣ ಮಾಡುತ್ತಾರೆ ಎನ್ನುವುದು ನಮಗೆ ಗೊತ್ತಾಗಬೇಕಲ್ಲಾ?

SRI P. VENKATARAMANA.—The duties of this Committee are to review the progress and implementation of the welfare programmes and other amenities to provide safeguard for Backward Classes and Minorities, and also to suggest ways and means for realising the objectives of the Governments policy to bring about the improvement in the conditions of the said class within the shortest possible time.

ಶ್ರೀ ಪ್ರಭಾಕರ ತೇಲ್ಕರ್,—ಈ ಅಧಿವೇಶನ ಮುಗಿಯುವುದರೊಳಗಾಗಿ ಮಾಡುತ್ತೀರಾ ಎಂದು ಸರ್ಕಾರದವರನ್ನು ಕೇಳುತ್ತೇನೆ.

ಅಧ್ಯಕ್ಷರು.—ಸರ್ಕಾರ ತೀರ್ಮಾನ ತೆಗೆದುಕೊಂಡಿದೆ ಎಂದು ಹೇಳುತ್ತಿದೆ. ಸರ್ಕಾರದಿಂದ ತೀರ್ಮಾನ ಬಂದರೆ ರೂಲ್ಸ್ ಕಮಿಟಿಯಲ್ಲಿ ತಿದ್ದುಪಡಿ ಮಾಡುತ್ತೇವೆ. ನಂತರ ಜಾರಿಗೆ ಬರುತ್ತದೆ.

SRI. PRABHAKAR TELKAR.—When the Government has taken a decision I think there should not be any delay. That is my submission,

MR. SPEAKER.—The Hon'ble Minister has answered that Government has taken a decision. Therefore there would not be any difficult for the Rules Committee to amend the rules. The Rules Committee is also seized of the matter.

ಶ್ರೀ ಎಂ. ಗಂಗಣ್ಣ.—ಆಂಧ್ರ ಪ್ರದೇಶದಲ್ಲಿ ಈ ರೀತಿಯ ಒಂದು ಕಲ್ಯಾಣ ಸಮಿತಿ ಇದೆ. ಅದೇ ರೀತಿ... ..

ಅಧ್ಯಕ್ಷರು.—ತಮಗೆ ಹೇಳಿದ್ದು ಅರ್ಥವಾಗಲಿಲ್ಲವೆ? ಸರ್ಕಾರ ತೀರ್ಮಾನ ತೆಗೆದುಕೊಂಡಿವೆ. ರೂಲ್ಸ್ ಅಮೆಂಡ್ ಮಾಡುವುದಕ್ಕೆ ಸಮಿತಿ ನೇಮಕವಾಗಿದೆ. ಸೂಕ್ತವಾದ ಅಮೆಂಡ್‌ಮೆಂಟ್ ಬರುತ್ತದೆ

Lands Submerged under Kabini Reservoir in Heggadadevanakote

736 SMT SUSHEELA CHELUVRARAJU (Heggadadevanakote).—Will the Minister for Revenue be pleased to state.—

(a) the extent of land submerged under Kabini Reservoir in Heggadadevanakote.;

(b) the extent of land sanctioned in other areas to the ryots who have lost their lands;

(c) whether lands have been granted to all the ryots who have lost their lands.

(d) if not, the number of ryot families to whom lands have to be given and when they will be given lands

SRI MALLIKARJUNA M. KHARGE.—(Minister for Revenue)

(a) Acres 9,685 Guntas 06½

(b) 8,775 — 10

(c) No.

(d) Land has to be given for 109 ryot families. At present there is no land belonging to Revenue Department for granting the same to them. Hence, spot inspection has already been done along with the Forest Department requesting for release of the forest lands for cultivation. Action will be taken for grant of lands to these ryot families after release of lands.

ಶ್ರೀಮತಿ ಸುಶೀಲ ಚೆಲುವರಾಜ್.—ಮಾನ್ಯ ಅಧ್ಯಕ್ಷರೆ, ಹೆಗ್ಗಡದೇವನಕೋಟೆಯಲ್ಲಿ ಕಬಿನಿ ಜಲಾಶಯದಿಂದ ಮುಳುಗಡೆಯಾಗಿ ಭೂಮಿ ಕಳೆದುಕೊಂಡು ಬೇರೆ ಜಮೀನು ಪಡೆಯದವರ ಸಂಖ್ಯೆ ೧೦೯ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಆದರೆ ಈ ಸಂಖ್ಯೆ ೩೨೦ ಎಂದು ಗೊತ್ತಾಗಿದೆ, ಇದರ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸುವುದರ ಜೊತೆಗೆ ಅಲ್ಲಿನ ರೈತರು ಜಮೀನು ಕಳೆದುಕೊಂಡು ಎಷ್ಟು ವರ್ಷಗಳಾಗಿವೆ ಎಂಬುದನ್ನು ತಿಳಿಸಬೇಕು,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೮೬೭೫ ಜಮೀನನ್ನು ಕಳೆದುಕೊಂಡ ಜನರ ಸಂಖ್ಯೆ ೧೪೧೬ ಅದರಲ್ಲಿ ೧೩೦೭ ಜನರಿಗೆ ಜಮೀನು ಕೊಟ್ಟಿದ್ದೇವೆ. ಇನ್ನು ೧೦೯ ಜನರಿಗೆ ಮಾತ್ರ ಕೊಡಬೇಕಾಗಿದೆ,